

ಇಷ್ಟಾರ್ಥಸಿದ್ಧಿಗಾಗಿ ಭಕ್ತರು ಈ ಗುಂಡುಗಳನ್ನು ಎತ್ತುತ್ತಾರೆ.



ವಂಶಪಾರಂಪರ್ಯ ಧರ್ಮಕರ್ತರು ಕಾರ್ಣಿಕ ಆವರಣಕ್ಕೆ ಕುದುರೆಯನ್ನೇರಿ ಬರುತ್ತಿರುವುದು.

ಇಂದು ಹಲವು ಜಾತಿ, ಜನಾಂಗದವರು ಆರಾಧ್ಯದೈವ ಎಂದು ಪರಿಗಣಿಸಿದ್ದಾರೆ. ಕರ್ನಾಟಕದಲ್ಲಿ ಮೈಲಾರಲಿಂಗನನ್ನು ಮಾರ್ತಾಂಡ ಭೈರವ, ಮೈಲಾರಿ, ಮೈಲಾರ, ಮಾಲತೇಶ ಮೊದಲಾದ ಹೆಸರುಗಳಿಂದ ಕರೆಯುವುದು ರೂಢಿ. ಮಹಾರಾಷ್ಟ್ರದಲ್ಲಿ ಖಂಡೋಬ ಎಂದು ಕರೆಯುತ್ತಾರೆ. ಮೈಲಾರ ಸಂಪ್ರದಾಯದ ಸುಮಾರು 14 ದೇವಾಲಯಗಳು ರಾಜ್ಯದಲ್ಲಿವೆ. ಅದರಲ್ಲಿ ಪ್ರಮುಖವಾದದ್ದೇ ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿ ತಾಲ್ಲೂಕಿನ ಮೈಲಾರ. ಇದಕ್ಕೆ ಹಿರೇ ಮೈಲಾರ ಎಂದೇ ಹೆಸರಿದೆ.

ಮೈಲಾರ ದೇವಸ್ಥಾನದ ಗರ್ಭಗುಡಿಯನ್ನು ಪ್ರವೇಶಿಸಿದರೆ ಅಲ್ಲೊಂದು ಗರ್ಭಲಿಂಗವಿದೆ. ಇಲ್ಲಿಯೇ ಶಿವನು ಅಸುರರನ್ನು ಸಂಹರಿಸಿದ ಎನ್ನುತ್ತಾರೆ. ಇದರ ಹಿಂದೆ ಸುಮಾರು ಐದು 6 ಅಡಿ ಎತ್ತರವಿರುವ ನಾಲ್ಕು ಕೈಗಳನ್ನು ಹೊಂದಿರುವ ಮೂರ್ತಿ ಇದೆ. ಆ ಕೈಗಳಲ್ಲಿ ಖಡ್ಗ, ತ್ರಿಶೂಲ, ಢಮರುಗ ಹಾಗೂ ಬಟ್ಟಲಿ ಇವೆ. ಈ ಮೂರ್ತಿಯನ್ನು ಮೃಣ್ಮಯ ಮೂರ್ತಿ ಎಂದು ಕರೆಯುತ್ತಾರೆ.

ಭರತ ಹುಣ್ಣಿಮೆ ಹಾಗೂ ಮುದ್ದಿ ಹುಣ್ಣಿಮೆ ಎಂಬ ಎರಡು ಉತ್ಸವಗಳ ಜೊತೆಗೆ ಒಮ್ಮೆ ಲಕ್ಷದೀಪೋತ್ಸವ ಮತ್ತು ಭಂಡಾರ ಷಷ್ಠಿಯನ್ನು ಬಿಟ್ಟರೆ ಇತ್ತೀಚೆಗೆ ಅಂತಹ ಆಚರಣೆಗಳು ಇಲ್ಲಿ ನಡೆದಿಲ್ಲ. ಮೈಲಾರಲಿಂಗನ ಭಕ್ತರು ತಾವು ಅಂದುಕೊಂಡ ಇಷ್ಟಾರ್ಥಗಳನ್ನು ಪೂರೈಸಲು ತಮ್ಮ ಯೋಗ್ಯತೆಗೆ ತಕ್ಕಂತೆ ಮುಂದಾಗುತ್ತಾರೆ. ದೀಡು ನಮಸ್ಕಾರ, ದೀವಿಟಿಗೆ ಸೇವೆ, ಕುದುರೆ ಸೇವೆ ಮೊದಲಾದ ಸೇವೆಗಳನ್ನು ಇಲ್ಲಿ ಸಲ್ಲಿಸುತ್ತಾರೆ.

ವಿಭಿನ್ನ ಕುದುರೆಸೇವೆ: ಕುದುರೆ ಸೇವೆ ಸ್ವಲ್ಪ ವಿಭಿನ್ನವಾದ ಸೇವೆ. ಚಾಟಿಯಿಂದ ತಮ್ಮನ್ನು ತಾವೇ ಬಡಿದುಕೊಳ್ಳುವ, ದೇಹ ದಂಡನೆಯ ಸೇವೆ ಇದು. ಬಾಳೆಹಣ್ಣು ಸಕ್ಕರೆ ಬೆರೆಸಿದ ಮಿಶ್ರಣಕ್ಕೆ ಹಣ್ಣು ತುಪ್ಪದ ಸೇವೆ ಎನ್ನುತ್ತಾರೆ. ಇದು ಮೈಲಾರಲಿಂಗನಿಗೆ ಶ್ರೇಷ್ಠವಾದ ಸೇವೆ ಎಂಬುದು ಭಕ್ತರ ನಂಬಿಕೆ. ಇದರ ಪ್ರಸಾದವನ್ನು ಸ್ವೀಕರಿಸುವವರು, ಗೊರವ–, ಗೊರವಿಯರು. ಆಗಿ ಹುಣ್ಣಿಮೆಯಂದು ಮೈಲಾರಲಿಂಗನ ಹಾಗೂ ಗಂಗಿಮಾಳಮ್ಮನ ನಡುವೆ ಮದುವೆ ಕಾರ್ಯ ನಡೆಯುತ್ತದೆ. ಖಂಡೇ ನವಮಿ ಹಾಗೂ ಕಡ್ಲಿಗಡುಬು ಹುಣ್ಣಿಮೆಗಳಲ್ಲಿ ಮೈಲಾರಲಿಂಗ ಹೊಳೆ(ನದಿ)ಗೆ ಹೋಗಿ ಬರುವ ಆಚರಣೆ, ನವರಾತ್ರಿಯಲ್ಲಿ ಪಲ್ಲಕ್ಕಿ ಸೇವೆ, ದಸರಾದಲ್ಲಿ ಶಿಬಾರಕ್ಕೆ ಹೋಗಿ ಬನ್ನಿ ಮುಡಿಯುವ, ಛಟ್ಟಿ ಅಮವಾಸ್ಯೆಯಂದು ಭಂಡಾರ ಪೂಜೆ, ನೂಲು ಹುಣ್ಣಿಮೆ ಆಚರಣೆ, ಧನುರ್ಮಾಸ ಆಚರಣೆ, ಬಸವ ಹುಣ್ಣಿಮೆ, ಗುಗ್ಗರಿ ಹಬ್ಬ ಮಡಿಚಟ, ಕಡಬಿನ ಕಾಳಗ– ಹೀಗೆ ಇಲ್ಲಿ ಒಂದಲ್ಲ ಒಂದು ಆಚರಣೆಗಳು ವರ್ಷದುದ್ದಕ್ಕೂ ನಡೆಯುತ್ತಲೇ ಇರುತ್ತವೆ.

ಗೊರವ ನುಡಿಯುವ ಕಾರಣಿಕದ ನುಡಿಯನ್ನು ಪ್ರತಿ ವರ್ಷ ಜನರು ಉತ್ಸಾಹದಿಂದ ಕಾದು ಕುಳಿತಿರುತ್ತಾರೆ. ಕಾರಣೀಕದ ಮುಖ್ಯ ಗುಡಿಯಿಂದ ಪೂರ್ವ ದಿಕ್ಕಿಗಿರುವ ಡೆಂಕನ ಮರಡಿಗೆ ಭಾರತ ಹುಣ್ಣಿಮೆಯ ಮರುದಿನ ಮೈಲಾರಲಿಂಗನ ಮೌನ ಉತ್ಸವ ಹೊರಡುತ್ತದೆ. ಇದು ಶಿವನು ಅಸುರರನ್ನು ಸಂಹರಿಸಲು ಯುದ್ಧಭೂಮಿಗೆ ಸದ್ದುಗದ್ದಲವಿಲ್ಲದೆ ಹೋದ ಸಂಕೇತ ಎಂಬುದು ಭಕ್ತರ ಭಾವನೆ. ಈ ಮೌನ ಮೆರವಣಿಗೆಯಲ್ಲಿ ಹೋದ ಕಾರ್ಣಿಕದ ಗೊರವಪ್ಪ ಎಂದರೆ ಮೈಲಾರಲಿಂಗಪ್ಪ ಡೆಂಕನ ಮರಡಿಯಲ್ಲಿ ಉಳಿದುಕೊಳ್ಳುತ್ತಾರೆ. ಕಾರ್ಣಿಕಕ್ಕೆ ಕಂಚಾವೀರರು, ಗೊರವ–, ಗೊರವಿಯರು ಹಾಗೂ ಭಕ್ತರು ನೆರೆಯುತ್ತಾರೆ. ಆ ದಿನವೇ ಸಂಜೆ ಕಾರ್ಣಿಕ ಮುಗಿದು ಹೋಗುತ್ತದೆ. ಇದು ಅಸುರರನ್ನು ಕೊಂದ ವಿಜಯದ ದಿನವೂ ಹೌದು.

ಸಂಪ್ರದಾಯದಂತೆ ಸ್ವಾಗತಿಸಲು ವೆಂಕಪ್ಪಯ್ಯ ಒಡೆಯರು ಕುದುರೆ ಏರಿ ಮುಖ್ಯ ಗುಡಿಯಿಂದ ಡೆಂಕನ ಮರಡಿಗೆ ಬರುತ್ತಾರೆ. ಈ ಹೊತ್ತಿಗೆ ನಾಡಿನಿಂದ ಬಂದ ಲಕ್ಷೋಪಲಕ್ಷ ಜನ 'ಏಳು ಕೋಟಿ, ಕೋಟಿಗೂ, ಚಾಂಗ ಮಲೋ' ಘೋಷಣೆ ಕೂಗುತ್ತಾ ಹರ್ಷೋದ್ಗಾರದಲ್ಲಿ ಮುಳುಗುತ್ತಾರೆ. ಸುಮಾರು 15 ಅಡಿ ಎತ್ತರದ ಬಿಲ್ಲನ್ನು ಕಾರ್ಣಿಕದ ಗೊರವಪ್ಪ ಸರಸರನೇ ಏರಿ 'ಸದ್ದಲೇ...' ಎಂದು ಅಬ್ಬರಿಸುತ್ತಾನೆ. ಆಗ ಸುತ್ತ ಮುತ್ತ ಎಲ್ಲೆಡೆ ಮೌನ ಆವರಿಸುತ್ತದೆ. ಅತ್ತಿತ್ತ ನೋಡಿ ತಟ್ಟನೆ ಕಾರಣಿಕದ ನುಡಿಯನ್ನು ಹೇಳುವ ಗೊರವ ಹಾಗೆಯೇ ಕೆಳಗೆ ಬೀಳುತ್ತಾನೆ. ಬಿಲ್ಲಿನ ಕೆಳಗೆ ನಿಂತುಕೊಳ್ಳುವ ಗೊರವಪ್ಪಗಳು ಗೊಂಗಡಿ ಹಾಸಿ ಆತನನ್ನು ನೆಲಕ್ಕೆ ಬೀಳದಂತೆ ಹಿಡಿದುಕೊಳ್ಳುತ್ತಾರೆ.

ಈ ಕಾರಣಿಕ ಜಾತ್ರೆ ಇತ್ತೀಚೆಗೆ ರಾಜಕೀಯ ಮಹತ್ವವನ್ನೂ ಪಡೆದುಕೊಳ್ಳುತ್ತಿದೆ. ಬಹುತೇಕ ಎಲ್ಲ ಪಕ್ಷಗಳ ಪ್ರತಿನಿಧಿಗಳೂ ಇಲ್ಲಿಗೆ ಬರುತ್ತಾರೆ. ಹಂಪಿ ಕನ್ನಡ ವಿ.ವಿ. ಆರಂಭಗೊಂಡ ಹೊಸದರಲ್ಲಿ ಮೈಲಾರಕ್ಕೆ ಸಂಶೋಧಕರು ಹಾಗೂ ವಿದ್ಯಾರ್ಥಿಗಳು ದೊಡ್ಡ ಸಂಖ್ಯೆಯಲ್ಲಿ ಬಂದು ಇಡೀ ಜಾತ್ರೆಯ ಆಚರಣೆಗಳ ಬಗ್ಗೆ, ಮೈಲಾರಲಿಂಗನ ಐತಿಹ್ಯದ ಬಗ್ಗೆ ದಾಖಲಿಸಿದ್ದಾರೆ. ದ.ರಾ. ಬೇಂದ್ರೆ, ಶಂಬಾ ಜೋಷಿ ಮುಂತಾದವರೂ ನಡೆಸಿರುವ ಅಧ್ಯಯನಗಳು ಪ್ರಕಟವಾಗಿವೆ. ಎಂ. ಚಿದಾನಂದಮೂರ್ತಿ ಹಾಗೂ ಡಾ. ಬಿ.ಎಂ. ನೇಗಿನಹಾಳ್ ಅವರು 'ಮೈಲಾರಲಿಂಗ ಖಂಡೋಬ' ಎಂಬ ಪುಸ್ತಕ ಬರೆದಿದ್ದಾರೆ.

ಮೈಲಾರಲಿಂಗ ಮಾತ್ರವಲ್ಲ ಜುಂಜಪ್ಪ, ಕೋಮಾಲಿ, ಕುರುಬತ್ತೆವ್ವ ಮೊದಲಾದವರ ಬಗ್ಗೆ ಹೆಚ್ಚಿನ ಅಧ್ಯಯನ ಆಗಬೇಕಾಗಿದೆ. ಹಾಗೆ ನೋಡಿದರೆ ಇದು ಸರ್ಕಾರದ ಹಣವನ್ನು ನೆಚ್ಚಿಕೊಂಡಿರುವ ಜಾತ್ರೆಯಲ್ಲ. ಜನರೇ ಜನರಿಗಾಗಿ ನಡೆಸುವ ಜನಪದ ಜಾತ್ರೆ. ಈಗ ಕಾರ್ಣಿಕ ನುಡಿಯುವ ಗೊರವಪ್ಪನಿಗೆ ಮೈಕ್ರೋ ಫೋನ್, ಪರಿಶಿಯ ಕಣ್ಗಾವಲಿಗೆ ಡ್ರೋಣ್ ಕ್ಯಾಮರಾ ಮತ್ತು ಸಿ.ಸಿ. ಕ್ಯಾಮರಾಗಳನ್ನು ಅಳವಡಿಸಲಾಗಿದೆ. ಲಕ್ಷಾಂತರ ಭಕ್ತರು ಬರುವ ಹಿನ್ನೆಲೆಯಲ್ಲಿ ಇಲ್ಲಿ ಇನ್ನಷ್ಟು ಮೂಲ ಸೌಲಭ್ಯಗಳನ್ನು ಒದಗಿಸಬೇಕಾದ ಅಗತ್ಯವಿದೆ. ಫೆಬ್ರುವರಿ 13ರಂದು ನಡೆದ ಈ ಸಲದ ಜಾತ್ರೆಗೂ ಲಕ್ಷಾಂತರ ಜನರು ಸೇರಿದ್ದರು. 'ಈ ವರ್ಷ ಮಳೆ ಬೆಳೆ ಚೆನ್ನಾಗಿ ಆಗುತ್ತದೆ. ಆದರೆ ಅತಿವೃಷ್ಟಿಯಿಂದ ಬೆಳೆ ಹಾಳಾಗಲಿದೆ' ಎಂದು ಗೊರವಪ್ಪ ನುಡಿದಿರುವ ಕಾರಣಿಕದ ನುಡಿಯ ಬಗ್ಗೆ ಈಗಲೂ ಚರ್ಚೆ ನಡೆದಿದೆ.